ಹಿಂದೆಯೇ ಹೊರಬಂದರೆ ಆಕೆ ಕರೆದುಕೊಂಡು ಹೋದದ್ದು ಆಸ್ಪತ್ರೆಯ ಮುಖ್ಯ ಡಾಕ್ಟರರ ಕೊಠಡಿಗೆ. 'ಇವರೇ ಅಮ್ಮ ನಿಮ್ಮ ಮಗುವಿನ ಆಪರೇಷನ್ನಿನ ಹಣ ಕಟ್ಟಿದ್ದು' ಎಂದ ನರ್ಸಿನ ಮಾತಿಗೆ ತನ್ನ ಪಾಲಿನ ದೇವರು ಯಾರೆಂದು ನೋಡಿದರೆ ಅವಳಿಗೆ ಬವಳಿ ಬಂದಂತಾಯ್ತು. ಸ್ಟೆತಾಸ್ಕೋಪನ್ನು ಕುತ್ತಿಗೆ ಸುತ್ತ ಇಳಿಬಿಟ್ಟುಕೊಂಡು ಕುರ್ಚಿಯ ಮೇಲೆ ಕುಳಿತಿದ್ದ ಕೃಷ್ಣ ನಸುನಗುತ್ತಿದ್ದ. ಅಲ್ಲಿ ಆಕೆಗೆ ಕಂಡದ್ದು ಆರಾಧಿಸುವ ನೋಟದಿಂದ ತನ್ನನ್ನು ನೋಡುತ್ತಿದ್ದ ನಿಷ್ಕಲ್ಮಷ ಪ್ರೀತಿಯ ರಾಧಾ ಕೃಷ್ಣ ನೃತ್ಯ ರೂಪಕದ ಕೃಷ್ಣ. ತನ್ನ ಒಂದು ಪ್ರೀತಿಯ ಮಾತಿಗೆ, ಒಲವಿನ ನೋಟಕ್ಕೆ ಹಾತೊರೆಯುತ್ತಿದ್ದ ತನ್ನ ಸಹಪಾಠಿ ಕೃಷ್ಣ.

★★★

ವರ್ಷಗಳು ಕಳೆದಿವೆ. ಈಗ ರಾಧೆಯೆಂದು ಹೆಸರು ಬದಲಾಯಿಸಿಕೊಂಡ ರಾಗಿಣಿ ಕೃಷ್ಣನ ಹೆಂಡತಿಯಾಗಿದ್ದಾಳೆ. ತನ್ನ ಹೆಸರನ್ನು ಬದಲಾಯಿಸುತ್ತೇನೆಂದು ಹೊರಟ ರಾಗಿಣಿಯನ್ನು ಕೃಷ್ಣ ವಿರೋಧಿಸಿದರೆ ಅವನ ಎದೆಗೊರಗಿದ ಅವಳು 'ನನ್ನ ಕೃಷ್ಣನಿಗೋಸ್ಕರ ಇಷ್ಟೂ ಮಾಡಬಾರದಾ ನಾನು' ಎಂದು ಕೇಳಿ ಅವನ ಬಾಯಿಯನ್ನು ಮುಚ್ಚಿಸಿದ್ದಾಳೆ. ಆಪರೇಷನ್ ಆಗಿ ಮರು ಬದುಕು ಪಡೆದು ಚೇತರಿಸಿಕೊಳ್ಳುತ್ತಿದ್ದ ಆಕೆಯ ಮಗನನ್ನು ತೊಡೆಯ ಮೇಲೆ ಕೂರಿಸಿಕೊಳ್ಳುತ್ತ ಕೃಷ್ಣ, 'ರಾಧಾ... ನಮಗೆ ಇದೊಂದೇ ಮಗು ಸಾಕು. ಬೇರೆ ಮಕ್ಕಳು ಬೇಡ ಆಗದೇ' ಎಂದು ಕೇಳಿದರೆ ಕಣ್ಣು ತುಂಬಿಸಿಕೊಂಡ ರಾಧೆ ಉತ್ತರಕ್ಕಾಗಿ ತಡಕಾಡುತ್ತಾಳೆ. ಒಬ್ಬಳೇ ಇರುವಾಗ ಆಕೆ ಎಲ್ಲಿಯಾದರು ಹಳೆಯದನ್ನು ನೆನಪಿಸಿಕೊಂಡು ಕಣ್ಣೀರು ಹಾಕುವುದನ್ನು ನೋಡಿದರೆ ಈಗ ಆಕೆಯನ್ನು ಗದರಿಸುವಷ್ಟು ಧೈರ್ಯಶಾಲಿಯಾಗಿರುವ ಕೃಷ್ಣ ಅದೇ ದನಿಯಲ್ಲಿ 'ಹಳೆಯದನ್ನೆಲ್ಲ ಯಾಕೆ ನೆನಪಿಸಿಕೊಂಡು ಕೊರಗುತ್ತೀಯ. ಈಗ ನೀನು ಈ ಕೃಷ್ಣನ ರಾಧೆ. ನನ್ನ ರಾಧೆ ಎಂದಿಗೂ ಕಣ್ಣೀರು ಹಾಕಬಾರದು' ಎನ್ನುತ್ತಾನೆ. ಆಗೆಲ್ಲ ಅವನ ಅಪ್ಪುಗೆಯಲ್ಲಿ ಕರಗುವ ಅವಳು ಜೋರಾಗಿ ಅತ್ತುಬಿಡುತ್ತಾಳೆ.

**ಪಿ.ಪಿ. ಉಪಾಧ್ಯ**

ಭಾರತೀಯ ಜೀವ ವಿಮಾ ನಿಗಮದಲ್ಲಿ ದೀರ್ಘ ಕಾಲದ ಸೇವೆ ಸಲ್ಲಿಸಿರುವ ಪಿ.ಪಿ. ಉಪಾಧ್ಯ ಹಿರಿಯ ವಿಭಾಗಾಧಿಕಾರಿಯಾಗಿ ನಿವೃತ್ತರಾಗಿದ್ದಾರೆ. ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.

70ರ ದಶಕದ ಪೂರ್ವಾರ್ಧದಲ್ಲಿ ಸಣ್ಣ ಕತೆಗಳ ಕ್ಷೇತ್ರ ಪ್ರವೇಶ. 'ಮಯೂರ' 'ಸುಧಾ' ಸೇರಿದಂತೆ ಕನ್ನಡದ ಬಹುತೇಕ ಮಾಸಪತ್ರಿಕೆ, ವಾರ ಪತ್ರಿಕೆ ಮತ್ತು ದಿನಪತ್ರಿಕೆಯ ಪುರವಣಿಗಳಲ್ಲಿ ಸುಮಾರು 100ಕ್ಕೂ ಹೆಚ್ಚು ಕತೆಗಳು ಪ್ರಕಟವಾಗಿವೆ. 'ಯಶೋದೆ' ಕಾದಂಬರಿ ಧಾರಾವಾಹಿಯಾಗಿ ಪ್ರಕಟಗೊಂಡಿದೆ. 'ಕಳೆದುಕೊಂಡಿದ್ದು ಮತ್ತು ಇತರ ಕತೆಗಳು' ಕಥಾಸಂಕಲನ ಹಾಗೂ ವ್ಯಕ್ತಿವಿಕಸನದ ಕುರಿತ ಮೂರು ಪುಸ್ತಕಗಳು ಪ್ರಕಟವಾಗಿವೆ. ಹೊಸ ಕಾದಂಬರಿಯೊಂದು ಪ್ರಕಟಣೆಯ ಹಾದಿಯಲ್ಲಿದೆ.